ವಿಷಯ: ಮಂಗಳೂರಿನಲ್ಲಿ ತೋಟಗಾರಿಕೆ ಬೆಳೆಗಾರರ ಸಂಸ್ಕರಣ ಮಾರಾಟ ಸಂಘ.

2635 (3910)

ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನಲ್ಲಿ ತೋಟಗಾರಿಕೆ ಬೆಳೆಗಾರರ ಸಂಸ್ಕರಣ ಮಾರಾಟ ಸಂಘದ ಘಟಕ ಎಷ್ಟು ಮಾರಾಟ ಕೇಂದ್ರಗಳನ್ನು ಹೊಂದಿದೆ?

ಆ) ಸದರಿ ಕೇಂದ್ರಗಳ ಬೆಲೆ ನಿಗಧಿಗೆ ನಿರ್ಧಿಷ್ಟ ಮಾನದಂಡವೇನು?

ಇ) ಮಾರಾಟ ಕೇಂದ್ರಗಳಲ್ಲಿ ತರಕಾರಿಗಳ ಬೆಲೆ ಉಳಿದ ಮಾರುಕಟ್ಟೆಗಳಿಗಿಂತ ಅಧಿಕವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಆ ಬಗ್ಗೆ ಬಂದ ದೂರುಗಳೆಷ್ಟು; ಸಿಬ್ಬಂದಿ ವರ್ಗದ ಬಗ್ಗೆ ಬಂದ ದೂರುಗಳೆಷ್ಟು;

ಉ) ಸರಕಾರ ಸಾರ್ವಜನಿಕ ಹಿತದೃಷ್ಟಿಯಿಂದ ಕೈಗೊಂಡ ಕ್ರಮಗಳೇನು?

ಶ್ರೀ ಡಿ.ಟಿ.ಜಿಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):

ಅ) ಮಂಗಳೂರಿನಲ್ಲಿ ಇಪ್ಪತ್ತು ಮಾರಾಟ ಕೇಂದ್ರಗಳನ್ನು ಹೊಂದಿದೆ.

ಆ) ಸಾಗಾಣಿಕೆ, ಪ್ಯಾಕಿಂಗ್ ವೆಚ್ಚ ಸೇರಿಸಿ ಆಡಳಿತ ನಿರ್ವಹಣಾ ವೆಚ್ಚ ಶೇ:25 ಸೇರಿಸಿ ಮಾರಾಟ ಬೆಲೆ ನಿಗಧಿಡಿಸಿ ವಹಿವಾಟನ್ನು ನಿರ್ವಹಿಸಲಾಗುತ್ತಿದೆ.

ಇ) ಬಂದಿದೆ.

ಈ) ದರದ ಬಗ್ಗೆ ಲಿಖಿತ ದೂರುಗಳು ಎರಡು, ಸಿಬ್ಬಂದಿ ವರ್ಗದ ಬಗ್ಗೆ ಒಂದು ದೂರು ಬಂದಿರುತ್ತದೆ.

ಉ) ಸಂಘವು ಸಾರ್ವಜನಿಕ ಹಿತದೃಷ್ಟಿಯಿಂದ ನ್ಯಾಯ ಬೆಲೆಯಲ್ಲಿ ನಿಖರ ತೂಕದಲ್ಲಿ ಹಣ್ಣು ತರಕಾರಿಗಳನ್ನು ನೇರವಾಗಿ ಬೆಳೆಗಾರರಿಂದ ಖರೀದಿಸಿ ಆಡಳಿತ ವೆಚ್ಚಕ್ಕಾಗುವಷ್ಟು ನಿರ್ವಹಣಾ ವೆಚ್ಚವನ್ನಿಟ್ಟು ಲಾಭ ನಷ್ಟವಿಲ್ಲದಂತೆ ಬಳಕೆದಾರರಿಗೆ ಸರಿಯಾದರ ತೂಕದಲ್ಲಿ ನಿಖರ ಬೆಲೆಯಲ್ಲಿ ವಿತರಿಸಲಾಗುತ್ತಿದೆ. ಬಳಕೆದಾರರಿಗೆ ವಿಧಿಸುವ ದರಗಳನ್ನು ದರ ಪಟ್ಟಗಳಲ್ಲಿ ನಮೂದಿಸಲಾಗುತ್ತಿದೆ. ಹಾಗೂ ಮಾರಾಟಗಾರ ನೌಕರರ ಬಗ್ಗೆ ದೂರುಗಳು ಬಂದಲ್ಲಿ ಆಗಿಂದಾಗ್ಗೆ ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತಿದೆ.